# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 824 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 12-12-2023. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರವು ಅಂತರ ರಾಷ್ಟ್ರೀಯ ಮಟ್ಟದ ಜವಳಿ ಮತ್ತು ಸಿದ್ದ ಉಡುಪಿನ ಪಾರ್ಕ್‌ಗಳ ನಿರ್ಮಾಣಕ್ಕೆ ಆಯ್ಕೆ ಮಾಡಿರುವ ಸ್ಥಳಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೇಂದ್ರ ಸರ್ಕಾರವು ಅಂತರ ರಾಷ್ಟ್ರೀಯ ಮಟ್ಟದ ಜವಳಿ ಮತ್ತು ಸಿದ್ಧ ಉಡುಪಿನ ಪಾರ್ಕ್‌ನ ನಿರ್ಮಾಣಕ್ಕೆ PM-MITRA Park ಯೋಜನೆಯಡಿ ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಕಿರಣಗಿ, ನದಿಸಿನ್ನೂರು ಹಾಗೂ ಫಿರೋಜಾಬಾದ್ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಡಿ 1000 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ. |
| (ಆ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ನಿರ್ಮಿಸುವ ಈ ಯೋಜನೆಯ ಧ್ಯೇಯೋದ್ದೇಶಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು | ರಾಜ್ಯದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ನಿರ್ಮಿಸುವ PM-MITRA Park ನ ಧ್ಯೇಯೋದ್ದೇಶಗಳು ಈ ಕೆಳಕಂಡಂತಿವೆ:<br>• ಈ ಯೋಜನೆಯು ಎಲ್ಲಾ ಜವಳಿ ಮೌಲ್ಯ ಸರಪಳಿಯನ್ನು ಒಂದೇ ಸ್ಥಳದಲ್ಲಿ ಸ್ಥಾಪಿಸುವ ಮೂಲಕ ಲಾಜಿಸ್ಟಿಕ್ಸ್ ವೆಚ್ಚವನ್ನು ಕಡಿಮೆ ಮಾಡಿ, ಹೂಡಿಕೆಯನ್ನು ಆಕರ್ಷಿಸಿ, ಉತ್ಪಾದನೆ, ಉದ್ಯೋಗ ಮತ್ತು ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವುದು.<br>• ಜವಳಿ ಉದ್ಯಮದ ಎಲ್ಲಾ ಮೌಲ್ಯ ಸರಪಳಿಯ ನ್ನೊಳಗೊಂಡ ಸಮಗ್ರ ದೊಡ್ಡ ಪ್ರಮಾಣದ ಮತ್ತು ಆಧುನಿಕ ಕೈಗಾರಿಕಾ ಮೂಲ ಸೌಕರ್ಯ ಸೌಲಭ್ಯವನ್ನು ಅಭಿವೃದ್ಧಿಪಡಿಸುವುದು.<br>• ಈ ಯೋಜನೆಯು ಜಾಗತಿಕ ಜವಳಿ ಮಾರುಕಟ್ಟೆಯಲ್ಲಿ ಕರ್ನಾಟಕವನ್ನು ಸ್ಪರ್ಧಾತ್ಮಕ ರಾಜ್ಯವನ್ನಾಗಿಸಲು ಹೂಡಿಕೆಗಳನ್ನು ಆಕರ್ಷಿಸಿ ಹೆಚ್ಚಿನ ಉದ್ಯೋಗಗಳನ್ನು ಸೃಜಿಸುವ ಗುರಿ ಹೊಂದಿದೆ.<br>• ಸುಸ್ಥಿರ ಕೈಗಾರೀಕರಣದ ಉತ್ತೇಜನೆ, ನಾವಿನ್ಯ ಅನ್ವೇಷಣೆ ಹಾಗೂ ಸ್ಥಿತಿಸ್ಥಾಪಕ ಮೂಲ ಸೌಕರ್ಯವನ್ನು ನಿರ್ಮಿಸುವುದು. |

| | | |
|---|---|---|
| ಇ) | ರಾಜ್ಯದಲ್ಲಿ ಈ ಯೋಜನೆ ಅಡಿಯಲ್ಲಿ ಸರ್ಕಾರದ ಇಲಾಖೆಗಳ ಮೂಲಕ ಮತ್ತು ಸಾರ್ವಜನಿಕ-ಖಾಸಗಿಯವರ ಸಹಭಾಗಿತ್ವದಲ್ಲಿ ಹಾಗೂ ಖಾಸಗಿ ಒಡೆತನದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪಾರ್ಕ್‌ಗಳು ಯಾವುವು ಮತ್ತು ಇವುಗಳ ನಿರ್ಮಾಣ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು) | PM-MITRA Park ಯೋಜನೆಯಡಿ ಕಲಬುರಗಿ ಜಿಲ್ಲೆಯಲ್ಲಿ ಮೆಗಾ ಪಾರ್ಕ್ ಸ್ಥಾಪಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ.<br><br>ಸಾರ್ವಜನಿಕ-ಖಾಸಗಿಯವರ ಸಹಭಾಗಿತ್ವದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ, ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ರಾಯಚೂರು ಜಿಲ್ಲೆಯ ರಾಯಚೂರು, ಧಾರವಾಡ ಜಿಲ್ಲೆಯ ನವಲಗುಂದ, ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಮತ್ತು ಚಿತ್ರದುರ್ಗ ಜಿಲ್ಲೆಯ ಕೊಂಡ್ಲಹಳ್ಳಿ ಈ ಭಾಗಗಲ್ಲಿ ಜವಳಿ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಿದೆ<br><br>ಖಾಸಗಿ ಒಡೆತನದಲ್ಲಿ ಬಳ್ಳಾರಿಯಲ್ಲಿ ಜೀನ್ಸ್ ಮತ್ತು ಉಡುಪುಗಳನ್ನು ಉತ್ತೇಜಿಸಲು ಟೆಕ್ಸ್‌ಟೈಲ್ ಪಾರ್ಕ್ ಅನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. |
| (ಈ) | ಈ ಯೋಜನೆಯಡಿಯಲ್ಲಿ ನಿರ್ಮಿತವಾಗಿರುವ ಪಾರ್ಕ್‌ಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುವ ಸೌಲಭ್ಯಗಳು ಮತ್ತು ನೆರವುಗಳು ಯಾವುವು? ಸಂಪೂರ್ಣ ಮಾಹಿತಿ ನೀಡುವುದು) | ➢ PM-MITRA Park ಯೋಜನೆಯಡಿ ನಿರ್ಮಿತವಾಗಲಿರುವ ಪಾರ್ಕ್‌ನ್ನು 02 ಹಂತಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕೇಂದ್ರ ಸರ್ಕಾರವು ರೂ.500.00 ಕೋಟಿಗಳ (ರೂ.300.00+200.00 ಕೋಟಿಗಳು) ಅನುದಾನ ಒದಗಿಸಲಿದೆ. ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ.<br><br>➢ ರಾಜ್ಯ ಸರ್ಕಾರವು PM-MITRA Park ಅನ್ನು ಸ್ಥಾಪಿಸಲು ರಚನೆಯಾಗಲಿರುವ ವಿಶೇಷ ಉದ್ದೇಶಿತ ವಾಹಕ (Special Purpose Vehicle)ಗೆ ಸಾಂಕೇತಿಕ ದರದಲ್ಲಿ 1000 ಎಕರೆ ಜಮೀನನ್ನು (99 ವರ್ಷಗಳ ಅವಧಿಗೆ ಪ್ರತಿ ಎಕರೆಗೆ ರೂ.1 ರಂತೆ) ಕ್ಯಾಬಿನೆಟ್ ಅನುಮೋದನೆಯೊಂದಿಗೆ ಹಸ್ತಾಂತರಿಸಲಿದೆ.<br><br>➢ ರಾಜ್ಯ ಸರ್ಕಾರವು ಸದರಿ ಪಾರ್ಕ್‌ನಲ್ಲಿ ಸ್ಥಾಪನೆಯಾಗಲಿರುವ ಜವಳಿ ಘಟಕಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಹಾಗೂ ನೀರನ್ನು ಸರಬರಾಜು ಮಾಡುವುದು. |

ಸಂಖ್ಯೆ: CI 143 JAKE 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಅನುಬಂಧ-1

- ಕೇಂದ್ರ ಸರ್ಕಾರದ 2021-22 ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ದೇಶದಾದ್ಯಂತ 07 ಮೆಗಾ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಘೋಷಿಸಲಾಗಿರುತ್ತದೆ.

- 2022-23 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಘೋಷಣೆ ಕಂಡಿಕೆ-272ರಲ್ಲಿ ಕಲಬುರಗಿ ಮತ್ತು ವಿಜಯಪುರದಲ್ಲಿ ಮೆಗಾ ಟೆಕ್ಸ್‌ಟೈಲ್ ಪಾರ್ಕ್‌ನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ಸ್ಥಾಪಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

- ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಕಿರಣಗಿ, ನದಿಸಿನ್ನೂರು ಹಾಗೂ ಫಿರೋಜಾಬಾದ್ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಡಿ 1000 ಎಕರೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಒಡೆತನದಲ್ಲಿ ರಚನೆಯಾಗಲಿರುವ SPV ಮುಖಾಂತರ ಮೆಗಾ ಜವಳಿ ಪಾರ್ಕ್‌ನ್ನು ಸ್ಥಾಪಿಸಲು ದಿನಾಂಕ:17.03.2023 ರಂದು ಘೋಷಿಸಿದ್ದು, ದಿನಾಂಕ:28.03.2023 ರಂದು ಪಾರ್ಕ್ ಸ್ಥಾಪನೆಗೆ ಚಾಲನೆ ನೀಡಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ ಎನರ್ಜಿ 210 ಇಇಬಿ 2022 ದಿನಾಂಕ:03.08.2022 ರಲ್ಲಿನ ಷರತ್ತು ಸಂಖ್ಯೆ (2),(3)&(4)ಗಳನ್ನು ಕೈಬಿಟ್ಟು ತಿದ್ದುಪಡಿ ಆದೇಶ ಹೊರಡಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಇವರನ್ನು ಕೋರುವಂತೆ ವಿನಂತಿಸಿ ಸರ್ಕಾರಕ್ಕೆ ದಿನಾಂಕ:27.09.2023 ರಂದು ಪತ್ರ ಬರೆಯಲಾಗಿರುತ್ತದೆ. ಪ್ರಸ್ತಾವನೆಯು ಇಂಧನ ಸಚಿವರ ಪರಿಶೀಲನೆಯಲ್ಲಿರುತ್ತದೆ.

- ಸದರಿ ಉದ್ದೇಶಿತ SPV ಕಂಪನಿಯನ್ನು ನೊಂದಾಯಿಸಲು ಹಾಗೂ ರಚಿಸಲು ಸರ್ಕಾರದ ಆದೇಶವನ್ನು ಹೊರಡಿಸಲು ಹಾಗೂ MOA, AOA ಮತ್ತು Joint Venture Agreement ಗಳನ್ನು ರಾಜ್ಯ ಸಚಿವ ಸಂಪುಟದ ಅನುಮೋದನೆಗಾಗಿ ಸಲ್ಲಿಸಿದೆ.

- ರಾಜ್ಯ ಸರ್ಕಾರವು PM-MITRA Park ಅನ್ನು ಸ್ಥಾಪಿಸಲು ರಚನೆಯಾಗಲಿರುವ ವಿಶೇಷ ಉದ್ದೇಶಿತ ವಾಹಕ (Special Purpose Vehicle)ಗೆ ಸಾಂಕೇತಿಕ ದರದಲ್ಲಿ 1000 ಎಕರೆ ಜಮೀನನ್ನು (ಪ್ರತಿ ಎಕರೆಗೆ ರೂ.1 ರಂತೆ 99 ವರ್ಷ ಅವಧಿಗೆ) ಕ್ಯಾಬಿನೆಟ್ ಅನುಮೋದನೆಯೊಂದಿಗೆ ಹಸ್ತಾಂತರಿಸಲಿದೆ

- PM-MITRA Park ಯೋಜನೆಯಡಿ ಜವಳಿ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದಂತೆ, Master Developer ಅನ್ನು ಗುರುತಿಸಲು ಸಹಾಯವಾಗಲು ಇ-ಪೋರ್ಟಲ್ ಮುಖಾಂತರ M/s Wazir Advisor Ltd., New Delhi ರವರು Transaction Advisor [illegible] ಸದರಿಯವರೊಂದಿಗೆ ಒಡಂಬಡಿಕೆ ಸಹಿ ಮಾಡಲಾಗುತ್ತಿದೆ. M/s Wazir Advisor Ltd., ರವರು Master Developer ಅನ್ನು ಆಯ್ಕೆ ಮಾಡಲು ಟೆಂಡರ್ ದಾಖಲಾತಿಗಳನ್ನು ಸಿದ್ಧಪಡಿಸಲು ಕ್ರಮವಹಿಸಿರುತ್ತಾರೆ.

- PM-MITRA MEGA Textile Park Kalaburagi ಇದರ ಸ್ಥಾಪನೆಗೆ ಸಂಬಂಧಿಸಿದಂತೆ Ministry of Environment Forest and Climate Change ರವರಿಂದ Environmental Clearance ನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ Environmental Clearance ನ್ನು ಪಡೆಯಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪೂರೈಸಲು Environmental Impact Assessment ಕೈಗೊಳ್ಳಲು ನುರಿತ ಹಾಗೂ ಅನುಭವಿ ಬಾಹ್ಯ ಮೂಲದ Empanelled Consultant (EIA) ಅವರ ನೇಮಕಾತಿ ಮಾಡಿಕೊಳ್ಳಲು KTPP ಕಾಯ್ದೆಯಡಿ ಪಾರದರ್ಶಕ ಪ್ರಕ್ರಿಯೆ ನಡೆಸಿ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.

for
ಜಂಟಿ ನಿರ್ದೇಶಕರು (ಜವಳಿ ನೀತಿ)
ಕೈಮಗ್ಗ ಮತ್ತು ಜವಳಿ ಇಲಾಖೆ,
ಕೇಂದ್ರ [illegible], [illegible]

# ಅನುಬಂಧ-2

## ಇಲಾಖಾ ವತಿಯಿಂದ ಪಿ.ಪಿ.ಪಿ ಮಾದರಿಯಲ್ಲಿ ಸ್ಥಾಪಿಸಲಾಗುತ್ತಿರುವ ಪಾರ್ಕ್‌ಗಳ ವಿವರ

<table>
<tr><th>Sl. No.</th><th>Park Name</th><th>Budget announcement and para</th><th>Park details</th><th>GO number and date</th><th>Status of Work</th></tr>
<tr><td>1.</td><td>ಕಾರ್ಕಳ ಟೆಕ್ಸ್‌ಟೈಲ್ ಪಾರ್ಕ್</td><td>2020-21 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-167</td><td>ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದಲ್ಲಿ ಸರ್ವೆ ನಂ.361/1 ರಲ್ಲಿ ಒಟ್ಟು 15 ಎಕರೆ ಜಮೀನನ್ನು ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲಾಗಿದೆ.</td><td>CI 56 JAKY 2020 dated:16.01.2021</td><td>ಮುಖ್ಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ State Level Single Window Approval ಸಭೆಯ ಪರಿಶೀಲನಾ ಹಂತದಲ್ಲಿರುತ್ತದೆ.</td></tr>
<tr><td>2</td><td>ಗುಳೇದಗುಡ್ಡ ಟೆಕ್ಸ್‌ಟೈಲ್ ಪಾರ್ಕ್</td><td>2021-22 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-218</td><td>ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಗುಳೇದಗುಡ್ಡ ತಾಲ್ಲೂಕಿನ ಮುರಡಿ ಗ್ರಾಮದ ರಿ.ಸ.ನಂ.77ಎ ರಲ್ಲಿ ಜಮೀನನ್ನು ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲಾಗಿದೆ.</td><td>CI 27 JAKY 2021 dated:28.09.2021</td><td rowspan="2">PPP ಮಾದರಿಯಲ್ಲಿ ಜವಳಿ ಪಾರ್ಕ್‌ನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು M/s iDeck ಸಂಸ್ಥೆಗೆ Transaction Advisor ಆಗಿ ನೇಮಿಸಲು KTPP ಕಾಯ್ದೆ 4G ಅನ್ವಯ ವಿನಾಯಿತಿ ನೀಡಲು ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.</td></tr>
<tr><td>3.</td><td>ನವಲಗುಂದ ಟೆಕ್ಸ್‌ಟೈಲ್ ಪಾರ್ಕ್</td><td>2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-273</td><td>ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಅನ್ನು ಸ್ಥಾಪಿಸಲು ನವಲಗುಂದ ಗ್ರಾಮದಲ್ಲಿ 15 ಎಕರೆ ವಿಸ್ತೀರ್ಣದ Cultivable Command (ಅಚ್ಚುಕಟ್ಟು ಪ್ರದೇಶ) ಪ್ರದೇಶದಲ್ಲಿ ಕಮಾಂಡ್ ಏರಿಯಾ ಅಥಾರಿಟಿ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳ ಅಡಿಯಲ್ಲಿ, ಬೆಳಗಾವಿ ಪ್ರಾಧಿಕಾರವನ್ನು 30 ವರ್ಷಗಳ ಅವಧಿಗೆ ಜವಳಿ ಇಲಾಖೆಗೆ ಭೋಗ್ಯಕ್ಕೆ ನೀಡಲಾಗಿದೆ.</td><td>CI 25 JAKY 2022 dated:12.04.2022</td></tr>
<tr><td>4.</td><td>ರಾಣೆಬೆನ್ನೂರು ಟೆಕ್ಸ್‌ಟೈಲ್ ಪಾರ್ಕ್</td><td>2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-273.</td><td>ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಅನ್ನು ಸ್ಥಾಪಿಸಲು ರಾಣೆಬೆನ್ನೂರು ತಾಲ್ಲೂಕಿನ ಬಡಬಸಾಪುರ ಗ್ರಾಮದಲ್ಲಿ ಸರ್ವೆ ನಂ.20 ರಲ್ಲಿ ಒಟ್ಟು 16 ಎಕರೆ 8 ಗುಂಟೆ ಜಮೀನು ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲಾಗಿದೆ.</td><td>CI 25 JAKY 2022 dated:12.04.2022</td><td>ಮುಖ್ಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಭೆ (SLSWA)ಗೆ ಮಂಡಿಸಲು ಕ್ರಮ ವಹಿಸಲಾಗುತ್ತಿದೆ.</td></tr>
</table>

...2

| Sl. No. | Park Name | Budget announcement and para | Park details | GO number and date | Status of Work |
|---|---|---|---|---|---|
| 5. | ರಾಯಚೂರು ಟೆಕ್ಸ್‌ಟೈಲ್ ಪಾರ್ಕ್ | - | ರಾಯಚೂರು ಜಿಲ್ಲೆಯ ರಾಯಚೂರಿನಲ್ಲಿ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಗಾಯರಾಣ ಸರ್ವೆ ನಂ.928/*/* ಒಟ್ಟು 15.00 ಎಕರೆ ಜಮೀನು ಜವಳಿ ಇಲಾಖೆಯ ಹೆಸರಿನಲ್ಲಿ ಕಾಯ್ದಿರಿಸಲಾಗಿದೆ. | - | ಕೈಮಗ್ಗ ಮತ್ತು ಜವಳಿ ಇಲಾಖೆಗೆ ಜಮೀನು ಮಂಜೂರಾತಿ ಪ್ರಕ್ರಿಯೆಗಳು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ. |
| 6. | ಚಿತ್ರದುರ್ಗ ಜಿಲ್ಲೆಯ ಕೊಂಡ್ಲಹಳ್ಳಿ ಪಾರ್ಕ್ | | ಜವಳಿ ಪಾರ್ಕ್ ಸ್ಥಾಪಿಸಲು ಕೊಂಡ್ಲಹಳ್ಳಿ ಗ್ರಾಮದ ಸರ್ವೆ ನಂ.29/* ರಲ್ಲಿ 30 ಎಕರೆ ಜಮೀನನ್ನು ಜವಳಿ ಇಲಾಖೆಯ ಹೆಸರಿನಲ್ಲಿ ಮಂಜೂರು ಮಾಡಲಾಗಿರುತ್ತದೆ. | | ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ. |

ಜಂಟಿ ನಿರ್ದೇಶಕರು (ಜವಳಿ ನೀತಿ)
for ಕೈಮಗ್ಗ ಮತ್ತು ಜವಳಿ ಇಲಾಖೆ,
ಕೇಂದ್ರ ಕಚೇರಿ, ಬೆಂಗಳೂರು

## ಅನುಬಂಧ-3

| Annexure-II For Greenfields Projects<br>PHASE-I | | | | |
|---|---|---|---|---|
| **S. No.** | **No. of Instalment** | **Precondition for the release** | **MoT Grant in Aid** | **Fund Mobilisation by Master Developer** |
| **Escrow-I** | | **Escrow-II** | | |
| 1 | 1st | (a) Selection of Master Developer<br>(b) Start of planning and development work<br>(c) Land Clearance<br>(d) Power & Water<br>(e) Environmental Clearance<br>(f) Mobilization of ₹ 50 cr by MD<br>(g) UC of Rs. 25 Cr for CI/SI | ₹ 50 Cr. | ₹ 50 Cr |
| 2 | 2nd | (a) UC of 75% of total fund mobilized (i.e ₹50+ ₹50)<br>(b) Commensurate Physical Progress on site<br>(c) Establishment of Power, Water System<br>(d) Completion of 1st Block of Plug & Play Facility<br>(e) Start of Construction for minimum 2 Textiles Manufacturing Units with ₹ 100 Crore planned investment at independent factory sites | ₹ 100 Cr. | ₹ 100 Cr |
| 3 | 3rd | (a) UC of 75% of ₹ 300 Cr. (GoI + SPV equity)<br>(b) 50% of commissioning of manufacturing units in plug & play facility.<br>(c) Suitable Physical milestones will be identified after approval. | ₹ 100 Cr. | ₹ 100 Cr |
| 4 | 4th | (a) UC of 75% of ₹500 Cr. (GoI + SPV equity)<br>(b)Completion of 2nd Block of plug & play facility<br>(c) Starting of Construction on at least 5 independent Factory sites with investment planning of a minimum ₹ 100 Crore.<br>(d) Other Suitable Physical milestones will be identified after approval of project and Concession agreement. | ₹ 50 cr. | ₹ 50 cr. |
| | | **Total** | **₹ 300 cr.** | **₹ 300 cr.** |

Phase-II development will be triggered once land occupancy by construction of minimum 60% of planned development in industry/processing area and one of following conditions are simultaneously met:

I. Cumulative investments of ₹ 1000 Crore made at the PM MITRA Park;
II. Cumulative annual employment of 25000 people generated at PM MITRA Park;

Funds under Phase II will be disbursed in following way:-

| For Greenfields Projects- PHASE-II | | | | |
|---|---|---|---|---|
| S. No. | No. of Instalment | Precondition for release | MoT Grant in Aid | Fund Mobilisation by Master Developer |
| | | | Escrow-I | Escrow-II |
| 1 | 1st | (a) UC of 90% of ₹ 600 Cr. (GoI + SPV fund mobilized in Phase I)<br>(b) Commissioning and operationalization of minimum 2 blocks of plug & play by manufacturing units.<br>(c) Operationalization of minimum 10 independent manufacturing facility with minimum ₹ 100 Crore investment<br>(d) Other Suitable Physical milestones will be identified after approval. | ₹ 50 cr. | ₹ 50 cr. |
| 2 | 2nd | (a) UC of 90% of ₹ 700 Cr. (GoI + SPV equity)<br>(b) Other Suitable Physical milestones will be identified after approval. | ₹ 50 cr. | ₹ 50 cr. |
| 3 | 3rd | (a) UC of 90% of ₹ 800 Cr. (GoI + SPV equity)<br>(b) Other Suitable Physical milestones will be identified after approval. | ₹ 50 cr. | ₹ 50 cr. |
| 4 | 4th | (a) UC of 100% of ₹ 900 Cr. (GoI + SPV equity)<br>(b) 100% of commissioning of manufacturing units in plug & play facility. | ₹ 50 cr. | ₹ 50 cr. |
| | | TOTAL | **₹ 200 cr.** | **₹ 200 cr.** |

Ramdas

ಜಂಟಿ ನಿರ್ದೇಶಕರು (ಜವಳಿ ನೀತಿ)

for ಕೈಮಗ್ಗ ಮತ್ತು ಜವಳಿ ಇಲಾಖೆ,

ಕೇಂದ್ರ ಕಚೇರಿ, ಬೆಂಗಳೂರು